## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 418 |
| ಸದಸ್ಯರ ಹೆಸರು | : | ಶ್ರೀ. ಟಿ.ಎ. ಶರವಣ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 07.12.2023. |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿರುವ ಅಂಜನಾಪುರ ಬಡಾವಣೆ, ಬನಶಂಕರಿ 6ನೇ ಘಟ್ಟ, ನಾಡಪ್ರಭು ಕೆಂಪೇಗೌಡ ಲೇಔಟ್‌ಗಳಲ್ಲಿ ಅರಣ್ಯಕ್ಕೆ ಸೇರಿದ ಜಾಗದಲ್ಲಿ ಹಾಗೂ ಬಫರ್ ವಲಯಗಳಲ್ಲಿ ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅರಣ್ಯಾ ಇಲಾಖೆಗೆ ಸೇರಿದ ಬಫರ್ ವಲಯದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿಲ್ಲದಿದ್ದರು ಪ್ರಾಧಿಕಾರವು ಯಾವ ಆಧಾರದ ಮೇಲೆ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ಅಂಜನಾಪುರ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಗಳಲ್ಲಿ ಅರಣ್ಯಕ್ಕೆ ಸೇರಿದ ಪ್ರದೇಶದಲ್ಲಿ ನಿವೇಶನಗಳನ್ನು ರಚಿಸಿರುವುದಿಲ್ಲ ಹಾಗೂ ಹಂಚಿಕೆಯನ್ನು ಮಾಡಿರುವುದಿಲ್ಲ. |
| ಆ) | ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಮುನ್ನ ಅನ್ಯ ಯೋಜನೆಗಳಿಗೆ ಸೇರಿದ ಹಾಗೂ ಖಾಸಗಿ ಸ್ವತ್ತನ್ನು ಅಧಿಸೂಚಿಸಿ ಸ್ವಾಧೀನ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸ್ವಾಧೀನ ಪ್ರಕ್ರಿಯೆಯ ವಿವರ ಸ್ಥಳ ಪರಿಶೀಲನೆ ವರದಿಯನ್ನೊಳಗೊಂಡಂತೆ ವೆಚ್ಚ ಪೂರ್ಣ ವಿವರ ನೀಡುವುದು ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಂಜನಾಪುರ ಬಡಾವಣೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಸಂಖ್ಯೆ: UDD/141/MNX/99, ದಿನಾಂಕ:11/09/2000 ರನ್ವಯ 459ಎಕರೆ 24ಗುಂಟೆ ಮತ್ತು UDD/344/MNX/2001, ದಿನಾಂಕ:08/08/2001 ರನ್ವಯ 47ಎಕರೆ 19ಗುಂಟೆ ಜಮೀನುಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br><br>ಬನಶಂಕರಿ 6ನೇ ಹಂತ ಬಡಾವಣೆಗಾಗಿ ಅಂತಿಮ ಅಧಿಸೂಚನೆ ಸಂಖ್ಯೆ: UDD/274/MNX/2001 Dated: 21/08/2001 ರನ್ವಯ 1598ಎಕರೆ 02ಗುಂಟೆ ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ:UDD/274/MNX/2002, ದಿನಾಂಕ:24/05/2002 ರನ್ವಯ 5ಎಕರೆ 15ಗುಂಟೆ ಜಮೀನುಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. |

| | | |
|---|---|---|
| | | ಮುಂದುವರೆದ ಬನಶಂಕರಿ 6ನೇ ಹಂತ ಬಡಾವಣೆಗಾಗಿ ಅಂತಿಮ ಅಧಿಸೂಚನೆ ಸಂಖ್ಯೆ: ನಅಇ/750/ಬೆಂಭೂಸ್ವಾ/2003 ದಿನಾಂಕ: 09/09/2003 ರನ್ವಯ 750 ಎಕರೆ ಜಮೀನುಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br><br>ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಅಂತಿಮ ಅಧಿಸೂಚನೆ ಸಂಖ್ಯೆ: UDD/51/MNX/2010, ದಿನಾಂಕ: 18/02/2010 ರನ್ವಯ 4043 ಎಕರೆ 27 ಗುಂಟೆ ಜಮೀನುಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br><br>ಮೇಲ್ಕಂಡ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಬಹುತೇಕ ಜಮೀನುಗಳು ಖಾಸಗಿ ಜಮೀನುಗಳಾಗಿರುತ್ತವೆ. ಸದರಿ ಬಡಾವಣೆಗಳ ಅಭಿವೃದ್ಧಿಗಾಗಿ ದಿನಾಂಕ:30.11.2023ರ ಅಂತ್ಯಕ್ಕೆ ಆಗಿರುವ ವೆಚ್ಚಗಳ ವಿವರಗಳು ಕೆಳಕಂಡಂತಿದೆ:–<br>**1) ಅಂಜನಾಪುರ ಬಡಾವಣೆಯ ಉದ್ದೇಶಕ್ಕಾಗಿ ರೂ.307.66 ಕೋಟಿಗಳು;**<br>**2) ಬನಶಂಕರಿ 6ನೇ ಹಂತ ಬಡಾವಣೆಗಾಗಿ ರೂ.838.52 ಕೋಟಿಗಳು;**<br>**3) ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ರೂ.3314.11 ಕೋಟಿಗಳು;** |
| ಇ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸೈಟ್ ಹರಾಜು ಪ್ರಕ್ರಿಯೆಯಲ್ಲಿನ ಲೋಪ ದೋಷಗಳಿಂದಾಗಿ ವ್ಯಾಜ್ಯ ಉಂಟಾಗಿದ್ದು, ಸಾರ್ವಜನಿಕರಿಗೆ ಆದ ಅನ್ಯಾಯ ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು? (ಸಂಪೂರ್ಣ ವಿವರ ನೀಡುವುದು) | ಈ ಹಿಂದೆ ಮ್ಯಾನುಯಲ್ (Manual) ವ್ಯವಸ್ಥೆಯಲ್ಲಿ ನಿವೇಶನಗಳನ್ನು ಹರಾಜು ಮಾಡುವ ಸಂದರ್ಭದಲ್ಲಿ ಲೋಪ ದೋಷಗಳು ಕಂಡುಬಂದಿದ್ದರಿಂದ, ಈ ವ್ಯವಸ್ಥೆಯ ಬದಲಾಗಿ ಪ್ರಾಧಿಕಾರದಿಂದ ಹರಾಜು ಮಾಡಬಹುದಾದ ನಿವೇಶನಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ನಿರ್ವಹಿಸಲಾಗುತ್ತಿದೆ. ಇ–ಹರಾಜು ಪ್ರಕ್ರಿಯೆಯ ತಂತ್ರಾಂಶವನ್ನು ಇತ್ತೀಚೆಗೆ ಮತ್ತಷ್ಟು ಆಧುನೀಕರಣಗೊಳಿಸಿರುವುದರಿಂದ ಇ–ಹರಾಜು ಪ್ರಕ್ರಿಯೆಯು ಸುಗಮವಾಗಿ ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 288 ಬೆಂಭೂಸ್ವಾ 2023**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ